Co-operative Societies in Sedam Taluk

179. SRI SHERKHAN (Sedam).—Will the Minister of State for Co-operation be pleased to state :—

(a) the number of Co-operative Societies in Sedam Taluka of Gulbarga District;

(b) the number of them, the accounts of which have been audited annually ;

(c) the name of the Co-operative Societies where funds have been misappropriated ;

(d) the action taken in this behalf by the Government?

SRI V.M. KUSNOOR (Minister of State for Co-operation)—

(a) 31.

(b) 10.

(c) (1) S.C.S., Nadepally.

(2) T.A.P.C.M.S., Sedam.

(3) Lambada Dairy C.S., Sedam.

(d) In all the cases Civil and Criminal action has been taken.

ಶ್ರೀ ಷೇರ್‌ಖಾನ್.—ಸೇಡಂ ತಾಲ್ಲೂಕಿನಲ್ಲಿ ಸುಮಾರು ೨೧ ಸೊಸೈಟಿಗಳು ಇವೆಯೆಂದು ತಿಳಿಸಿದ್ದೀರಿ. ಇದರಲ್ಲಿ ಆಡಿಟ್ ಆಗಿರುವ ಹಾಗೂ ಆಗದೇ ಇರುವ ಸೊಸೈಟಿಗಳು ಎಷ್ಟು ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ವಿ.ಎಂ. ಕುಸನೂರು.—ಒಟ್ಟು ೨೧ ಸೊಸೈಟಿಗಳು ಇದ್ದು, ಅದರಲ್ಲಿ ಈ ವರ್ಷ ೧೦ ಸೊಸೈಟಿಗಳ ಆಡಿಟ್ ಕೆಲಸ ಮುಗಿದಿದೆ, ಇನ್ನೂ ಉಳಿದಿರತಕ್ಕ ಸೊಸೈಟಿಗಳಲ್ಲಿ ಆಡಿಟ್ ಆಗುತ್ತಿದೆ.

ಶ್ರೀ ಷೇರ್‌ಖಾನ್.—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಮೂರು ಸಹಕಾರ ಸಂಘಗಳ ಹೆಸರುಗಳನ್ನು ಕೊಟ್ಟಿದ್ದೀರಿ. ಅಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ತಮಗೆ ಯಾವಾಗ ಗೊತ್ತಾಯಿತು ಮತ್ತು ಯಾವ ವರ್ಷದಲ್ಲಿ ಹಣ ದುರುಪಯೋಗವಾಗಿದೆ ಎನ್ನುವುದು ತಿಳಿಸುತ್ತೀರಾ?

ಶ್ರೀ ವಿ.ಎಂ. ಕುಸನೂರು.—ಯಾವ ವರ್ಷದಲ್ಲಿ ದುರುಪಯೋಗವಾಯಿತು ಎನ್ನುವುದು ನನ್ನ ಹತ್ತಿರ ಇಲ್ಲ. ಮೂರು ಸೊಸೈಟಿಗಳಲ್ಲಿ ದುರುಪಯೋಗವಾಗಿದೆ ಎಂದು ನಮಗೆ ವರದಿ ಬಂದಿದೆ.

ಶ್ರೀ ಷೇರ್‌ಖಾನ್.—ಇವುಗಳ ಬಗ್ಗೆ ಕೇಸುಗಳನ್ನು ತಾವು ಯಾವಾಗ ಬುಕ್ ಮಾಡಿದಿರಿ ?

ಶ್ರೀ ವಿ.ಎಂ. ಕುಸನೂರು.—ಲಂಬಾಡಿ ಡೈನು ಸಹಕಾರ ಸಂಘದ ಬಗ್ಗೆ ನಾವು ಕ್ರಿಮಿನಲ್ ಕೇಸ್ ಹಾಕಿದ್ದು, ಅದು ಡಿಸ್‌ಮಿಸ್ ಆಗಿದೆ. ಮತ್ತೆ ನಾವು ಸಿವಿಲ್ ಕೇಸನ್ನು ಬುಕ್ ಮಾಡಿದ್ದೇವೆ. ಟಿ.ಎ.ಪಿ.ಸಿ.ಎಂ.ಎಸ್ ಬಗ್ಗೆ ಕ್ರಿಮಿನಲ್ ಹಾಗೂ ಸಿವಿಲ್ ಕೇಸು ಎರಡನ್ನೂ ಹಾಕಿದ್ದೇವೆ. ನಡಪಲ್ಲಿ ಸೊಸೈಟಿಯ ಬಗ್ಗೆ ಕ್ರಿಮಿನಲ್ ಕೇಸ್ ಮಾಡುವುದಕ್ಕೆ ಚಾರ್ಜ್‌ಷೀಟ್ ಹಾಕಿ, ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಷೇರ್‌ಖಾನ್.—ಈ ಕೇಸಗಳು ಕೋರ್ಟಿನಲ್ಲಿ ಡಿಸಮಿಸ್ ಆಗುವುದಕ್ಕೆ ಕಾರಣ ನಿಮ್ಮ ಕಛೇರಿಯ ಅಧಿಕಾರಿಗಳು ಕೇಸನ್ನು ಸರಿಯಾಗಿ ಪುಟ್-ಅಪ್ ಮಾಡದಿರುವುದು. ಆದಕಾರಣ ಅಧಿಕಾರಿಗಳನ್ನು ಏನಾದರು ತಪ್ಪಿದ್ದರೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ವಿ.ಎಂ. ಕೂಸನೂರು.—ಅಧಿಕಾರಿಗಳ ತಪ್ಪಿದ್ದರೆ ಅವರ ಮೇಲೆ ಸೂಕ್ತ ಕ್ರಮ ಕೈಕೊಳ್ಳುತ್ತೇನೆ.